**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.

**ಸಿ.ಸಿ. ಸಂಖ್ಯೆ.7852023**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಯಗಟಿ ಪೊಲೀಸರು

-ವಿರುದ್ಧ-

ಆರೋಪಿತರು ಃ ಹನುಮಂತಪ್ಪ ಮತ್ತೊಬ್ಬರು

ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ಹಾಗೂ 1 ನೇ ಹೆಚ್ಚುವರಿ ವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಹನುಮಂತಪ್ಪ ಯಾನೆ ಚಂದ್ರಶೇಖರ ಬಿನ್ ಶೇಷಪ್ಪ, ಸುಮಾರು 30 ವರ್ಷ,

2. ಶ್ರೀಮತಿ ಶಿವಮ್ಮ ಕೋಂ ಚಂದ್ರಶೇಖರ, ಸುಮಾರು 28 ವರ್ಷ ಮನೆಗೆಲಸ,
   ಇಬ್ಬರು ವ್ಯವಸಾಯಗಾರರು, ವಾಸಃ ವಿಠಲಾಪುರ ಗ್ರಾಮ,
   ಯಗಟಿ ಹೋಬಳಿ,ಕಡೂರು ತಾಲ್ಲೂಕಿನ ನಿವಾಸಿಗಳು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ಮೊದಲನೆಯದಾಗಿ ಯಗಟಿ ಠಾಣಾ ವ್ಯಾಪ್ತಿಯ ವಿಠಲಾಪುರ ಗ್ರಾಮದಲ್ಲಿ ದಿಃ11.11.2022 ರಂದು ಬೆಳಗ್ಗೆ 8.30 ಗಂಟೆ ಸಮಯದಲ್ಲಿ ಚಾಸಾ-4 ರಿಂದ 6 ರವರೊಂದಿಗೆ ಮುಳ್ಳನ್ನು ತೆಗೆದು ಹೊಲಕ್ಕೆ ಹೋಗಿ ಜೋಳವನ್ನು ಬಿತ್ತನೆ ಮಾಡಿ ವಾಪಸ್ಸು ಚಾಸಾ-1 ರವರು ಮುಳ್ಳು ಹಾಕಿದ ಬೇಲಿ ಹತ್ತಿರ ಮನೆಗೆ ಬರುತ್ತಿದ್ದಾಗ ಆರೋಪಿಯಾದ ನೀವು ಚಾಸಾ-1 ರವರನ್ನು ತಡೆದು ಅಡ್ಡಗಟ್ಟಿ ನಿಲ್ಲಿಸಿದ್ದು, ಆದಕಾರಣ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ **341** ಸಹವಾಚಕ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ನೀನು ಯಾಕೆ ಬೇಲಿ ತೆಗೆದು ಹೊಲಕ್ಕೆ ಹೋಗಿದ್ದು, ನಿಮ್ಮ ಅಪ್ಪನ ಆಸ್ತಿ ಏನಿದೆ ಎಂದು ಇಬ್ಬರು ಸೇರಿ ಬಾಯಿಗೆ ಬಂದಂತೆ ಬೈಯ್ದು, ಅವಮಾನ ಮಾಡಿದ್ದು , ಆದ್ದರಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ **504** ಸಹವಾಚಕ ಕಲಂ **34** ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 19 ನೇ ಮೇ ಮಾಹೆ 2025.

ಸಹಿ/-

(ಸವಿತರಾಣಿ ಹೆಚ್.ವಿ.)

ಸಮವರ್ತಿ ಪ್ರಭಾರ 1 ನೇ ಹೆಚ್ಚುವರಿ ಸಿವಿಲ್
ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕಡೂರು.